ಬಂದೆ. ಈ ಗಂಡ್ಸರನ್ನ ನಂಬಕ್ಕೆ ಆಗಲ್ಲ. ಅದೂ ಅಲ್ದೆ ಬೀರ ಕುಡುಕ ಬ್ಯಾರೆ... ಈರಿಗೆ ಅವನ ಮಗ್ಳು ಸಿಕ್ತದೋ ಇಲ್ವೋ. ಯಾವ್ದಕ್ಕೂ ನೀವು ಅವಳ ಮ್ಯಾಲೆ ಒಂದು ಕಣ್ಣಿಡಿ. ಮತ್ತೆ ಗೌಡ್ರು ನನ್ನ ನೋಡಿದ್ರೆ ಕಷ್ಟ, ನಾನು ಬರ್ತೀನಿ” ಎಂದು ಹೇಳಿ ಬಂದ ಓಣಿಯಲ್ಲೇ ವಾಪಸು ಹೊರಟಳು. ರಸ್ತೆ ಸೇರಿದಾಗ ತಲೆಗೊಂದು ಪಟ್ಟಿ ಸುತ್ತಿಕೊಂಡ ಈರಿ ಮಗನ ಜೊತೆ ಬರುತ್ತಿರುವುದು ಕಂಡಿತು. ಪಟ್ಟಿಯ ಒಂದು ಬದಿ ಕೆಂಬಣ್ಣ ಇತ್ತು. ಏನಾಯ್ತೇ ತಲೆಗೆ ಎಂದು ಕೇಳಿದ ಕಮ್ಲಿಗೆ, ಬಾಗಿಲು ಬಡೀತು ಎಂದು ಈರಿ ಹೇಳಿ ಮತ್ತೇನೂ ಮಾತಾಡದೆ ಮುಂದೆ ಹೋದಳು. ತನ್ನಷ್ಟೇನೂ ಮೈ ತುಂಬಿಕೊಂಡಿರದ ಈರಿಯ ಜೊತೆ ನಿಜವಾಗಿಯೂ ಗೌಡರಿಗೆ ಸಂಬಂಧ ಉಂಟಾ ಎಂದು ಕಮ್ಲಿ ಅನುಮಾನಿಸುತ್ತಾ ತನ್ನ ಮನೆ ದಾರಿ ಹಿಡಿದಳು.

ಕಮ್ಲಿ ಹೇಳಿದ ಸುದ್ದಿ ಕೇಳಿ ಗೌಡತಿ ಕಂಗಾಲಾಗಿದ್ದಳು. ತನ್ನ ಗಂಡ ಈರಿಯ ಜೊತೆ ಸಲಿಗೆಯಿಂದ ಇದ್ದಿದ್ದನ್ನು ಅವಳೆಂದೂ ನೋಡಿರಲಿಲ್ಲ. ಈರಿಯೂ ಗೌಡರೆದುರು ನಿಲ್ಲುವುದೇ ಇಲ್ಲ ಎಂಬಷ್ಟು ಅಪರೂಪ. ದಿನಾ ರಾತ್ರಿ ಗಂಡ ಹೊರಗೆ ಹೋಗುವುದು ಕುಡಿದು ಬರಲು ಎಂದು ತಾನು ತಿಳಿದದ್ದು ಸುಳ್ಳೇ? ಇವರು ಆ ವೇಳೆ ಈರಿಯ ಜೊತೆ... ಗೌಡತಿಗೆ ತಾನು ಯೋಚಿಸುತ್ತಿರುವುದೆಲ್ಲ ಸರಿ ಎಂದು ಒಮ್ಮೆ, ತಪ್ಪು ಎಂದು ಒಮ್ಮೆ ಅನಿಸಿತು. ಗಂಡನನ್ನಂತೂ ಕೇಳುವ ಹಾಗಿಲ್ಲ, ಈರಿಯನ್ನು ಕೇಳಿದರೆ ಅವಳ್ಯಾಕೆ ನಿಜ ಹೇಳುತ್ತಾಳೆ? ಈ ಕಮ್ಲಿಗೆ ಚಾಡಿ ಹೇಳುವ ಅಭ್ಯಾಸ ಇದೆ ಎಂಬುದು ಲೋಕಕ್ಕೇ ಗೊತ್ತು. ಆದರೂ ಅಕಸ್ಮಾತ್ ಅವಳು ಸತ್ಯ ಹೇಳಿದ್ದರೆ? ಅದೂ ಅಲ್ಲದೆ ತನ್ನ ಗಂಡ ಹೇಳಿದ್ದು ಅಂತ ಬೇರೆ ಹೇಳಿದಳಲ್ಲ. ಸುಮ್ಮನೆ ಇರುವುದಕ್ಕಿಂತ ಈರಿ ಬಂದರೆ ಏನಾದರೂ ನೆವ ತೆಗೆದು ಜಗಳ ಮಾಡಿ ಇನ್ನು ಮನೆ ಮೆಟ್ಟಿಲು ಹತ್ಬೇಡ ಎಂದು ಹೇಳುವುದೇ ಸರಿ ಎಂದು ಗೌಡತಿ ತೀರ್ಮಾನಿಸಿದಳು.



ಹಣೆಗೆ ಕೆಂಪು ಪಟ್ಟಿ ಕಟ್ಟಿಕೊಂಡು ಬಂದ ಈರಿಯನ್ನು ಕಂಡು ಏನಾಯಿತೇ ಎಂದು ಗೌಡರು ಕೇಳಿದರು. ಈರಿ ಸೆರಗು ಬಾಯಿಗೆ ಮುಚ್ಚಿಕೊಂಡು ಮುಸಿಮುಸಿ ಅಳುತ್ತಾ ಹಿಂದಿನ ದಿನ ನಡೆದ ಸುದ್ದಿ ಎಲ್ಲಾ ಹೇಳಿದಳು. ಅವಳ ದನಿ ಗೌಡತಿಯ ಕಿವಿಗೆ ಬಿದ್ದು ಬಾಗಿಲ ಹಿಂದೆ ಬಂದು ನಿಂತು ಆಲಿಸಿದಳು. “ನಾನು ದುಡಿಯೋದು, ಇವರು ಕುಡಿಯೋದು. ನೀವು ಬುದ್ಧಿ ಹೇಳಿ. ಇರೋ ದುಡ್ಡೆಲ್ಲ ನಿನ್ನೆ ತಗಂಡು ಹೋಗಿ ಕುಡಿತಕ್ಕೆ ಸುರ್ದು ಬಂದಿದಾರೆ. ನೀವು ಕೊಟ್ಟಿರೋದು ಇತ್ತು ಅದ್ರಲ್ಲಿ” ಎಂದಳು. ಕೊನೆಯ ಮಾತು ಕೇಳಿದ್ದೇ ಗೌಡತಿಗೆ ಎಲ್ಲಾ ಅನುಮಾನವೂ ಪರಿಹಾರವಾಗಿ ಕಮ್ಲಿ ಹೇಳಿದ್ದರಲ್ಲಿ ಒಂದು ಅಕ್ಷರವೂ ಸುಳ್ಳಲ್ಲ ಅನಿಸಿ ಸಿಟ್ಟೇರಿ ಹೊರಬಂದರು. ಅವಳು ಬಂದ ರೀತಿಯನ್ನು ನೋಡಿಯೇ ಗೌಡರು ಏನೋ ಅನಾಹುತ ಆಗುತ್ತದೆ ಎಂದೂಹಿಸಿದರು.

“ಯಾವಾಗಿಂದ ಈ ಹಾದರದ ಕೆಲ್ಸ? ಬೆಕ್ಕು ಕಣ್ಮುಚ್ಚಿ ಹಾಲು ಕುಡಿದ್ರೆ ಯಾರಿಗೂ ಗೊತ್ತಾಗಲ್ವಾ?” ಅಂತ ಗೌಡತಿ ಕೂಗಿದ್ದು ಯಾರನ್ನು ಉದ್ದೇಶಿಸಿ ಎಂಬುದೇ ತಿಳಿಯದೆ ಗೌಡರು, ಈರಿ ಒಬ್ಬರನ್ನೊಬ್ಬರು ನೋಡಿ ಮತ್ತೆ ಗೌಡತಿಯತ್ತ ನೋಡಿದರು. ಬುಸುಗುಟ್ಟುತ್ತಿದ್ದ ಗೌಡತಿ, “ಮನೇರ ಥರಾನೆ ನಿನ್ನ ನೋಡ್ಕೊಂಡು ನಿನ್ನ ಕಷ್ಟಸುಖಕ್ಕೆಲ್ಲಾ ಆಗ್ತಿದ್ದ ನಂಗೇ ಹೀಗೆ ಮಾಡ್ದ್ಯಲ್ಲ...” ಎಂದಾಗ ಹೆಂಡತಿ ಕೂಗಿದ್ದು ತಮಗಲ್ಲ ಅನಿಸಿ ಗೌಡರಿಗೆ ಸಮಾಧಾನವಾಯಿತು. ಈರಿ ಯಾರ ಜೊತೆ ಹಾದರ ಮಾಡಿರಬಹುದು ಎಂಬ ಯೋಚನೆ ಬಂತು. ಗೌಡತಿಯ ಮಾತು ಕೇಳಿ ಈರಿ ಬೆಚ್ಚಿಬಿದ್ದಳು. ತಾನೆಂತ ಹಾದರ ಮಾಡಿದ್ದು ಎಂಬುದೇ ಗೊತ್ತಾಗಲಿಲ್ಲ. “ಎಂತ ಹೇಳೋದು ಅಮ್ಮ ನೀವು... ನಾನೆಂತಾ ಮಾಡಿದೀನಿ?” ಎಂದು ಅವಳು ಕೇಳಿದ್ದಕ್ಕೆ, “ಮತ್ತೆ ಮಾತಾಡ್ಬೇಡ, ಮಾಡೋದೆಲ್ಲ ಮಾಡಿ ಈಗ